- - **ಸಿ.ಸಿ. ನಂ.1116/2025**

**ಪಿ. ಡಬ್ಲ್ಯೂಃ 1**

**( ಇಂದು ದಿಃ 13/01/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)**

**ಪಾಟೀ ಸವಾಲು : ಆರೋಪಿ ಪರ ಶ್ರೀಡಿ ಎಮ್ ವಿ ವಕೀಲರಿಂದ,**

ನಾನು ಪಿರ್ಯಾದಿ ಸಂಸ್ದೆಯಲ್ಲಿ ಕಳೆದ 28 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದೇನೆ. ಸಾಲ ನೀಡುವಾಗ ನಾನು ಮ್ಯಾನೇಜರ್ ಆಗಿರಲಿಲ್ಲ. ಸದರಿ ಶಾಖೆಯಲ್ಲಿ ವ್ಯವಸ್ಥಾಪಕರು ಇದ್ದಾರೆ. ಅವರು ಬಂದು ಸಾಕ್ಷಿ ನುಡಿಯಲು ಯಾವುದೇ ತೊಂದರೆ ಇಲ್ಲಾ. ಆರೋಪಿಗೆ 60 ಕಂತುಗಳ ವೈಯಕ್ತಿಕ ಸಾಲವನ್ನು ನೀಡಿದ್ದು ಸಾಲ ನೀಡುವ ಮೊದಲು ರೂ. 2,500 ಶೇರಿನ ಮೊತ್ತ ಹಾಗೂ ರೂ. 5,000 ಅನ್ನು ಎಪ್ ಡಿ ಯನ್ನು ಪಡೆದಿರುತ್ತೇವೆ. ಸದರಿ ಪ್ರಕರಣ ನಡೆಸಲು ನನಗೆ ನಿರ್ದೇಶಕರ ಮಂಡಳಿಯವರು ಅಧಿಕಾರ ವನ್ನು ನೀಡಿದ ಬಗ್ಗೆ ಠರಾವು ಮಾಡಿದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆದರೆ ಸದರಿ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಆರೋಪಿಯು ಬೇರೆಯವರ ಸಾಲಕ್ಕೆ ಜಾಮೀನುದಾರ ಆದ ಬಗ್ಗೆ ದಾಖಲೆ ನೋಡಿ ಹೇಳಬಹುದು. ಆರೋಪಿ ಈ ಹಿಂದೆ ನಮ್ಮ ಸಂಸ್ದೆಯಲ್ಲಿ ಸಾಲವನ್ನು ಪಡೆದಿರುತ್ತಾರೆ. ಆರೋಪಿ ಯಾವ ದಿನಾಂಕಕ್ಕೆ ಚೆಕ್ಕನ್ನು ನೀಡಿದ್ದ ಬಗ್ಗೆ ಆವಕ ಜಾವಕ ಪುಸ್ತಕ ಇದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆದರೆ ಸದರಿ ಪುಸ್ತಕವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಚೆಕ್ಕಿನ ಮೇಲೆ ಇರುವ ಬರವಣಿಗೆ ಮತ್ತು ಶಾಹಿಯಲ್ಲಿ ವ್ಯತ್ಯಾಸ ಕಂಡುಬರುತ್ತಿದೆ ಎಂದರೆ ಸರಿಯಲ್ಲ. ಸಾಲ ಕಟ್ಟು ಬಾಕಿ ಆದಾಗ ವಕೀಲರ ನೊಟೀಸನ್ನು ಜಾಮೀನುದಾರರಿಗೆ ಹಾಗೂ ಆರೋಪಿಗೆ ನೀಡಿದ್ದು ಇರುತ್ತದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆರೋಪಿಗೆ ವಕೀಲರ ನೊಟೀಸನ್ನು ನೀಡಿದ್ದು ಇರುತ್ತದೆ. ನಮ್ಮ ಸಂಸ್ದೆಯಲ್ಲಿ ಲೋನ್ ಲೆಡ್ಜರ್ ಇಲ್ಲಾ. ಆರೋಪಿ ಯಾವುದೇ ಕಂತನ್ನು ತುಂಬಿಲ್ಲಾ. ಆರೋಪಿ ಸಂಪೂರ್ಣ ಸಾಲ ಚುಕ್ತಾ ಮಾಡಿದ್ದಾರೆ ಎಂದರೆ ಸರಿಯಲ್ಲ. ಚೆಕ್ಕಿನ ಮೇಲೆ ಇರುವ ಸಹಿ ಹಾಗೂ ಅಂಚೆ ಸ್ವೀಕೃತಿ ಪತ್ರದ ಮೇಲೆ ಇರುವ ಸಹಿಯಲ್ಲಿ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ವಕೀಲರ ನೊಟೀಸು ಆರೋಪಿಗೆ ತಲುಪಿಲ್ಲಾ ಎಂದರೆ ಸರಿಯಲ್ಲ. ಆರೋಪಿಯು ನಮ್ಮ ಸಂಸ್ದೆಯಲ್ಲಿ ಎಷ್ಟು ಬಾರಿ ಸಾಲ ಪಡೆದಿದ್ದಾರೆ ಎಂದು ದಾಖಲೆ

ನೋಡಿ ಹೇಳಬಹುದು. ಹಿಂದಿನ ಸಾಲದ ಭದ್ರತೆಗಾಗಿ ಆರೋಪಿ ನೀಡಿದ ಚೆಕ್ಕನ್ನು ದುರುಪಯೋಗಪಡಿಸಿ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ**